## ಪದವಿ ಪ್ರಮಾಣ ಪತ್ರ ವಿತರಿಸುವ ಬಗ್ಗೆ ಸೂಚನೆಗಳು

1. ಘಟಿಕೋತ್ಸವ ಪದವಿ ಪ್ರಮಾಣ ಪತ್ರಕ್ಕಾಗಿ ನಂತರ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ (ಅಂತಿಮ ವರ್ಷ/ಸೆಮಿಸ್ಟರ್ ಪರೀಕ್ಷೆಯ ಸಮಯದಲ್ಲಿ ಮಾತ್ರ ಸಲ್ಲಿಸಬೇಕು.)
2. ಇದಕ್ಕಾಗಿ ಪ್ರತ್ಯೇಕವಾಗಿ ಅರ್ಜಿ ಶುಲ್ಕ ಮತ್ತು ನಂತರದ ವರ್ಷಗಳಲ್ಲಿ ಶೋಧನಾ ಶುಲ್ಕ ಪಾವತಿಸಬೇಕಾಗಿಲ್ಲ.
3. ಪದವಿ ಪ್ರಮಾಣ ಪತ್ರಕ್ಕಾಗಿ ಆ ವರ್ಷಕ್ಕೆ ನಿಗದಿಪಡಿಸಿರುವ ಶುಲ್ಕವನ್ನು ಅಂತಿಮ ವರ್ಷದ/ಸೆಮಿಸ್ಟರ್ ಪರೀಕ್ಷೆಗೆ ತೆಗೆದುಕೊಳ್ಳುವ ಸಮಯದಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಪಾವತಿಸಬೇಕು. (ಒಮ್ಮೆ ಮಾತ್ರ)
4. ಆ ಪರೀಕ್ಷೆಯಲ್ಲಿ ಅಭ್ಯರ್ಥಿ (NCL ತೆಗೆದ) ತೇರ್ಗಡೆಯಾದಲ್ಲಿ ನಂತರದಲ್ಲಿ ನಡೆಯುವ ಘಟಿಕೋತ್ಸವದ ನಂತರ ಪದವಿ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.
5. ಒಂದು ವೇಳೆ ಪರೀಕ್ಷೆಯಲ್ಲಿ ಆ ಅಭ್ಯರ್ಥಿ ಅನುತ್ತೀರ್ಣನಾದಲ್ಲಿ ಅಥವಾ (ಹಿಂದಿನ ವರ್ಷಗಳ ಬಾಕಿ ಇದ್ದಲ್ಲಿ) ಇವುಗಳಲ್ಲಿ ಉತ್ತೀರ್ಣನಾದ ನಂತರ ನಡೆಯುವ ಘಟಿಕೋತ್ಸವ ಸಮಾರಂಭದ ನಂತರ ವಿತರಿಸಲಾಗುವುದು. ಪದವಿ ಪ್ರಮಾಣ ಪತ್ರಕ್ಕಾಗಿ ಒಮ್ಮೆ ಶುಲ್ಕ ಪಾವತಿಸಿದರೆ ಪುನಃ ಪಾವತಿಸಬೇಕಾಗಿಲ್ಲ.
6. ಸಂಬಂಧಿಸಿದ ಘಟಿಕೋತ್ಸವ ಮುಗಿದ ಸುಮಾರು ಒಂದು ತಿಂಗಳ ಒಳಗಾಗಿ ಆ ಅಭ್ಯರ್ಥಿಯು ಸಲ್ಲಿಸಿರುವ (ಸ್ಟಾಂಪ್ ಅಳತೆಯ) ಭಾವಚಿತ್ರವನ್ನು ಅಂಟಿಸಿ, ಹಾಲೋಗ್ರಾಂ ಅಂಟಿಸಿ, ಲ್ಯಾಮಿನೇಷನ್ ಮಾಡಿ. ಆ ಅಭ್ಯರ್ಥಿಯು ನೀಡಿರುವ ವಿಳಾಸಕ್ಕೆ ಪದವಿ ಪ್ರಮಾಣ ಪತ್ರವನ್ನು ಕೊರಿಯರ್ ಅಥವಾ ನೋಂದಣಿ ಸ್ವೀಕೃತಿ ಅಂಚೆ (ಆರ್‌ಪಿಎಡಿ) ಮೂಲಕ ನೇರವಾಗಿ ಕಳುಹಿಸಲಾಗುವುದು.
7. ಅಭ್ಯರ್ಥಿಯು ಘಟಿಕೋತ್ಸವ ಪರಿನಿಯಮಾವಳಿಯ ಪ್ರಕಾರ ನಿಗದಿಪಡಿಸಿರುವ ಘೋಷಣೆಗೆ ಸಹಿ ಮಾಡಿ, ಅರ್ಜಿಯೊಂದಿಗೆ ಲಗತ್ತಿಸಿರುವ ಚೀಟಿಯಲ್ಲಿ ಪೂರ್ಣ ವಿಳಾಸ ಇತ್ಯಾದಿ ವಿವರಗಳನ್ನು ನಮೂದಿಸಿ, ಪರೀಕ್ಷಾ ಅರ್ಜಿಯ ಜೊತೆ ಲಗತ್ತಿಸಬೇಕು. (ಒಮ್ಮೆ ಮಾತ್ರ).
8. ತನ್ನ ಇತ್ತೀಚಿನ ಅಂಚೆ ಚೀಟಿ (ಸ್ಟಾಂಪ್ ಸೈಜ್) ಅಳತೆಯ ಎರಡು ಭಾವಚಿತ್ರಗಳನ್ನು ನಿಗದಿತ ಸ್ಥಳಗಳಲ್ಲಿ ಅರ್ಜಿಗೆ ಅಂಟಿಸಬೇಕು.
9. ಮೇಲೆ ಅಂಟಿಸಿದ ಭಾವಚಿತ್ರವನ್ನು ಕಾಲೇಜಿನ ಪ್ರಾಂಶುಪಾಲರು ಸಹಿ ಮಾಡಿ ಮೊಹರು ಹಾಕಿ ದೃಢೀಕರಿಸಿರಬೇಕು. ಕೆಳಗೆ ಇರುವ ಭಾವಚಿತ್ರವನ್ನು ದೃಢೀಕರಿಸಬಾರದು. ಇದನ್ನು ಪದವಿ ಪ್ರಮಾಣ ಪತ್ರದಲ್ಲಿ ಅಂಟಿಸಲು ಬಳಸಲಾಗುವುದು.
10. ಭಾರತದ ಹೊರಗೆ ಪದವಿ ಪತ್ರವನ್ನು ಕಳುಹಿಸಬೇಕಾಗಿದ್ದರೆ, ನಿಗದಿತ ಶುಲ್ಕದೊಡನೆ ಹೆಚ್ಚುವರಿ ಅಂಚೆ ವೆಚ್ಚ 300–00ಗಳನ್ನು ಪಾವತಿ ಮಾಡಬೇಕು.
11. ಪದವಿ ಪತ್ರವು ಅಭ್ಯರ್ಥಿಗೆ ವಿತರಣೆಯಾಗದೆ ವಿಶ್ವವಿದ್ಯಾನಿಲಯಕ್ಕೆ ವಾಪಸ್ಸು ಬಂದರೆ, ಅದನ್ನು ಮತ್ತೆ ಪಡೆಯುವಾಗ 100–00 ರೂಪಾಯಿಗಳ ಹೆಚ್ಚುವರಿ ಶುಲ್ಕವನ್ನು ನೀಡಬೇಕು.
12. ಸೂಚಿತ ವಿಷಯಕ್ಕೆ ಹೊರತುಪಡಿಸಿ ಸಂಬಂಧಪಡದ ವಿಷಯಕ್ಕೆ ಅಭ್ಯರ್ಥಿಗಳು ಪಾವತಿಸುವ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

ಇದು ಏಪ್ರಿಲ್/ಮೇ–2002 ಹಾಗೂ ನಂತರ ನಡೆಯುವ ಎಲ್ಲಾ ಪದವಿಗಳ ಅಂತಿಮ ವರ್ಷ/ಸೆಮಿಸ್ಟರ್ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅನ್ವಯಿಸುತ್ತದೆ.

(ಏಪ್ರಿಲ್/ಮೇ–2002ಕ್ಕೆ ಮೊದಲು ನಡೆದಿರುವ ಅಂತಿಮ ವರ್ಷದ/ಸೆಮಿಸ್ಟರ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ಈ ಹಿಂದೆ ಇದ್ದ ಪದ್ಧತಿಯೇ ಅಂದರೆ ಪ್ರತ್ಯೇಕವಾಗಿ ಕುಲಸಚಿವ (ಮೌಲ್ಯಮಾಪನ) ಇವರಿಗೆ ಅರ್ಜಿ ಸಲ್ಲಿಸಿ ಶುಲ್ಕ, ಶೋಧ ಶುಲ್ಕ ಪಾವತಿಸಿ ಪದವಿ ಪ್ರಮಾಣ ಪತ್ರ ಪಡೆಯುವ ಪದ್ಧತಿ ಮುಂದುವರೆಯುತ್ತದೆ.)

ಸಹಿ /–
ಕುಲಸಚಿವ (ಮೌಲ್ಯಮಾಪನ)

W.O. 216—MUPM—50,000 copies—22-8-2006

## DECLARATION

I hereby solemnly declare and promise that, if admitted to the degree of ......................., I shall, in my daily life and conversation, conduct myself, as befits a member of this University, that I shall, to the utmost of my capacity and opportunity, support the cause of morality and sound learning, and that, as far as in me lies, I shall uphold and advance the social order and the well-being of my fellowmen.

ನನಗೆ ನೀಡಲಾಗುವ ಪದವಿಯ ದೆಸೆಯಿಂದ ನಾನು ಸೇರುವ ವೃತ್ತಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಪ್ರಾಮಾಣಿಕತೆಯಿಂದಲೂ ಎಚ್ಚರಿಕೆಯಿಂದಲೂ ನಿರ್ವಹಿಸುತ್ತೇನೆಂದೂ, ಎಲ್ಲ ಸಂದರ್ಭಗಳಲ್ಲೂ ವೃತ್ತಿ ಗೌರವ ಮತ್ತು ಪಾವಿತ್ರ್ಯವನ್ನು ಕಾಪಾಡಿಕೊಂಡು ಬರುತ್ತೇನೆಂದೂ ವಿದ್ಯೆಯನ್ನು ನಿಂದ್ಯ ಉದ್ದೇಶಗಳಿಗೆ ಬಳಸುವುದಿಲ್ಲವೆಂದೂ ರುಜುಪಥದಿಂದ ವಿಚಲಿತನಾಗುವುದಿಲ್ಲವೆಂದೂ ಈ ಮೂಲಕ ಪ್ರಾಮಾಣಿಕವಾಗಿ ಭರವಸೆ ನೀಡುತ್ತೇನೆ.

*I shall faithfully and carefully fulfil the duties of the profession to which I may be admitted by virtue of my degree, that I shall, on all occassions, maintain its purity and reputation and I shall never deviate from the straight path of their hounourable exercise by making my knowledge subservient to unworthy ends.

*Non-professional graduates shall score this off.

ವೃತ್ತಿಪರವಲ್ಲದ ಪದವಿಯ ಅಭ್ಯರ್ಥಿಗಳು ಇದನ್ನು ಹೊಡೆದುಹಾಕತಕ್ಕದ್ದು.

Place :
ಸ್ಥಳ
Date :
ದಿನಾಂಕ

ಅಭ್ಯರ್ಥಿಯ ಸಹಿ/Signature of the Candidate

---

## FOR OFFICE USE ONLY (UNIVERSITY)

Verified the details as above and are correct    Date    *Signature (clerk)*
*ಸಹಿ (ಗುಮಾಸ್ತ)*

| Month & Year of passing<br>ಉತ್ತೀರ್ಣರಾದ ವರ್ಷ ಮತ್ತು ತಿಂಗಳು | Month :<br>ತಿಂಗಳು | Year :<br>ವರ್ಷ | Class Obtained :<br>ಪಡೆದ ದರ್ಜೆ |
|---|---|---|---|

Date of convocation
ಘಟಿಕೋತ್ಸವದ ದಿನಾಂಕ

Sl. No. of the Degree Certificate
ಪದವಿ ಪ್ರಮಾಣ ಪತ್ರ ಸಂಖ್ಯೆ

Despatched on :
ರವಾನಿಸಿದ ದಿನಾಂಕ

Despatch No :
ರವಾನೆ ಸಂಖ್ಯೆ

*(of those who verified the Degree Certificate) :*
*Signature*

| Clerk : | Superintendent : | Asst. Registrar/Dy. Registrar |
|---|---|---|
| Name : | Name : | Name : |
| Date : | Date : | Date : |